KASM620028332025

Presented on : 22-11-2025
Registered on : 22-11-2025
Decided on : 03-08-2026
Duration : 0 years, 8 months, 12 days

# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಸಾಗರ.

**ಉಪಸ್ಥಿತರು**

**ಶ್ರೀ ಮಾದೇಶ ಎಂ.ವಿ.,** ಬಿ.ಕಾಂ., ಎಲ್.ಎಲ್.ಬಿ.,
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಸಾಗರ.

**ದಿನಾಂಕ 3 ನೇ ಆಗಸ್ಟ್ 2026.**

**ಅಸಲು ದಾವಾ ಸಂಖ್ಯೆ 258/2025**

**ವಾದಿ** ಶ್ರೀಮತಿ ಸುಹಾನ ಬಾನು
ಅಲಿಯಾಸ್ ಸಹನಾ ಹೆಚ್.
ಕೋಂ ಮಹಮ್ಮದ್ ಫೈಜಿಲ್,
ವಯಸ್ಸು ಸುಮಾರು 24,
ವಾಸಃ ಕೇರಾಫ್ಃ ತಂದೆ ಶೇಕ್ ಹಸನ್,
ಕೋಟೆಕೊಪ್ಪ, ನೀಚಡಿ, ಸಾಗರ
ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

***(ಪ್ರತಿನಿಧಿಸಿದವರು ಶ್ರೀ ಎನ್.ಜಿ.ಕೆ. ವಕೀಲರು)***

**ವಿರುದ್ಧ**

**ಪ್ರತಿವಾದಿ** ಮಹಮ್ಮದ್ ಫೈಜಿಲ್
ಬಿನ್ ಇಕ್ಬಾಲ್ ಅಹಮ್ಮದ್,
ವಯಸ್ಸು ಸುಮಾರು 30 ವರ್ಷ,
ವಾಸಃ ಆರ್.ಎಂ.ಎಲ್. ನಗರ,
ಶಿವಮೊಗ್ಗ, ಶಿವಮೊಗ್ಗ ಜಿಲ್ಲೆ.

***(ಏಕಪಕ್ಷೀಯ)***

| | | |
|---|---|---|
| ದಾವೆಯನ್ನು ಹೂಡಿದ ದಿನಾಂಕ | : | 22-11-2025 |
| ದಾವೆಯ ಸ್ವರೂಪ | : | ಘೋಷಣಾತ್ಮಕ ಪರಿಹಾರ |
| ಸಾಕ್ಷಿಗಳನ್ನು ವಿಚಾರಣೆ ಮಾಡಲು ಪ್ರಾರಂಭಿಸಿದ ದಿನಾಂಕ | : | 01-07-2026 |
| ತೀರ್ಪನ್ನು ಉಚ್ಚರಿಸಿದ ದಿನಾಂಕ | : | 03-08-2026 |
| ಒಟ್ಟು ಅವಧಿ | : | ವರ್ಷ/ ತಿಂಗಳು/ದಿನ<br>**00 08 12** |

**(ಮಾದೇಶ ಎಂ.ವಿ.,)**
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಸಾಗರ.

## ತೀರ್ಪು

ಪ್ರಸ್ತುತ ದಾವೆಯನ್ನು ವಾದಿಯು ಪ್ರತಿವಾದಿಯ ವಿರುದ್ಧ ವ್ಯವಹಾರ ಪ್ರಕ್ರಿಯಾ ಸಂಹಿತೆ ಆದೇಶ 7 ನಿಯಮ 1 ಹಾಗು ಮುಸ್ಲಿಂ ವಿವಾಹ ವಿಚ್ಛೇದನೆ ಕಾಯ್ದೆ 1939 ಕಲಂ, 2(8–ಎ) ರ ರೀತ್ಯಾ ಸಲ್ಲಿಸಿ, ದಿನಾಂಕ 01–07–2018 ರಂದು ಹೊಸನಗರ ತಾಲ್ಲೂಕು, ರಿಪ್ಪನಪೇಟೆಯ ವಿಶ್ವಮಾನವ ಸಭಾಭವನದಲ್ಲಿ ಪ್ರತಿವಾದಿಯೊಂದಿಗೆ ನಡೆದಿರುವ ತಮ್ಮ ವಿವಾಹವನ್ನು ವಿಚ್ಚೇಧನದ ಮೂಲಕ ರದ್ದುಪಡಿಸಬೇಕೆಂದು ಕೋರಿ ಸಲ್ಲಿಸಿರುತ್ತಾರೆ.

2. ವಾದಿ ಮತ್ತು ಪ್ರತಿವಾದಿ ಪರಸ್ಪರ ಗಂಡ–ಹೆಂಡತಿಯರಾಗಿದ್ದು, ಸದರಿಯವರ ವಿವಾಹವು ದಿನಾಂಕ 01–07–2018 ರಂದು ಮುಸ್ಲಿಂ ಧಾರ್ಮಿಕ ಮತಪದ್ಧತಿಯಂತೆ, ಹೊಸನಗರ ತಾಲ್ಲೂಕು, ರಿಪ್ಪನಪೇಟೆಯ ವಿಶ್ವಮಾನವ ಸಭಾಭವನದಲ್ಲಿ ಗುರುಹಿರಿಯರ ಸಮಕ್ಷಮ ನಡೆದಿರುತ್ತದೆ. ಸದರಿಯವರಿಗೆ ತಮ್ಮ ವೈವಾಹಿಕ ಜೀವನದಿಂದ ಫರ್ಹಾನ್ ಎಂಬ ಮಗು ಜನಿಸಿರುತ್ತದೆ. ಮದುವೆಯ ಸಮಯದಲ್ಲಿ ವಾದಿಯ ಕುಟುಂಬದವರು 5 ತೊಲ ಚಿನ್ನ, ಒಂದು ಚೈನ್, ಒಂದು ಉಂಗುರ, ಒಂದು ಗಾಡ್ರೇಜ್, ಬಾಳು ಬಳುವಳಿ ಮತ್ತು 1 ಲಕ್ಷ ರೂ. ಗಳನ್ನು ವರೋಪಚಾರವಾಗಿ ಕೊಟ್ಟು ಮದುವೆ ಮಾಡಿಕೊಟ್ಟಿರುತ್ತಾರೆ. ಮದುವೆಯ ಖರ್ಚು–ವೆಚ್ಚಗಳನ್ನು ಉಭಯೇತರರ ಕುಟುಂಬದವರು ಹಂಚಿಕೊಂಡಿರುತ್ತಾರೆ. ವಿವಾಹದ ನಂತರ ವಾದಿ ಮತ್ತು ಪ್ರತಿವಾದಿಯ ನಡುವೆ

ವೈಮನಸ್ಸು ಉಂಟಾಗಿ, ಪ್ರತಿವಾದಿಯು ಕಿರುಕುಳ ತಾಳಲಾರದೆ ವಾದಿಯು ತನ್ನ ಮಗನೊಂದಿಗೆ ತಮ್ಮ ತವರು ಮನೆಗೆ ಬಂದು ವಾಸವಾಗಿರುತ್ತಾರೆ. ತದನಂತರ, ಪ್ರತಿವಾದಿಯು ದಿನಾಂಕಃ 09.04.2021 ರಂದು ವಾದಿಗೆ ಒಂದು ನೋಟೀಸ್ ನ್ನು ನೀಡಿದ್ದು, ಸದರಿ ನೋಟೀಸಿನಲ್ಲಿ ವಾದಿಗೆ ಬೇರೆ ವ್ಯಕ್ತಿಯೊಂದಿಗೆ ಅನೈತಿಕ ಸಂಬಂಧ ಇದೆ ಎಂದು ನೋಟಿಸ್ ನೀಡಿರುತ್ತಾರೆ. ಈ ಸಂಬಂಧ ವಾದಿ ಮತ್ತು ಪ್ರತಿವಾದಿಯ ಮಧ್ಯೆ ಹಲವಾರು ಪಂಚಾಯ್ತಿಗಳಾಗಿ ವಾದಿ ಮತ್ತು ಪ್ರತಿವಾದಿಯನ್ನು ಒಂದುಗೂಡಿಸಲು ಪ್ರಯತ್ನ ಮಾಡಿದರು ಸಹ ಎಲ್ಲಾ ಪ್ರಯತ್ನಗಳು ವಿಫಲವಾಗಿರುತ್ತವೆ. ನಂತರ, ವಾದಿಯು ಪ್ರತಿವಾದಿಯ ವಿರುದ್ಧ ಇದೇ ನ್ಯಾಯಾಲಯದಲ್ಲಿ ಕ್ರಿಮಿನಲ್ ಮಿಸ್. 73/2021 ನ್ನು ಜೀವನಾಂಶವನ್ನು ಕೋರಿ ಸಲ್ಲಿಸಿರುತ್ತಾರೆ.

3. ಆದರೆ, ಪ್ರತಿವಾದಿಯು ವಾದಿಗಾಗಲೀ, ವಾದಿಯ ಮಗನಿಗಾಗಲೀ ಜೀವನಾಂಶವನ್ನು ನೀಡಿರುವುದಿಲ್ಲ. ಮದುವೆಯಾದ ಒಂದು ವರ್ಷಗಳ ಕಾಲ ವಾದಿ ಮತ್ತು ಪ್ರತಿವಾದಿಯು ಜೀವನ ನಡೆಸಿಕೊಂಡು ಬಂದಿರುತ್ತಾರೆ. ನಂತರ, ಭಿನ್ನಾಭಿಪ್ರಾಯ ಉಂಟಾಗಿ 2021 ರಿಂದ ವಾದಿ ಮತ್ತು ಪ್ರತಿವಾದಿಯು ಪ್ರತ್ಯೇಕವಾಗಿ ಜೀವನ ನಡೆಸಿಕೊಂಡು ಬಂದಿರುತ್ತಾರೆ. ಈ ದಾವೆಗೆ ವ್ಯಾಜ್ಯ ಕಾರಣವು ವಾದಿ ಮತ್ತು ಪ್ರತಿವಾದಿಯು 2021 ನೇ ಇಸವಿಯಿಂದ ಪ್ರತ್ಯೇಕವಾಗಿ ವಾಸ ಮಾಡಿಕೊಂಡು ಬಂದಾಗಿನಿಂದ ಉಂಟಾಗಿರುತ್ತದೆ. ನಂತರ, ವಾದಿಯು

ಪ್ರತಿವಾದಿಯೊಂದಿಗೆ ಜೀವನ ನಡೆಸುವುದು ಕಷ್ಟ ಸಾಧ್ಯವೆಂದು ತಿಳಿದು, ಈ ದಾವೆಯನ್ನು ಪ್ರತಿವಾದಿಯ ವಿರುದ್ಧ ವಿವಾಹ ವಿಚ್ಛೇಧನ ಕೋರಿ ಸಲ್ಲಿಸಿರುತ್ತಾರೆ.

4. ನ್ಯಾಯಾಲಯದಿಂದ ಸಮನ್ಸ್ ಜಾರಿಯಾದ ನಂತರ ಪ್ರತಿವಾದಿಯು ನ್ಯಾಯಾಲಯಕ್ಕೆ ಹಾಜರಾಗದೇ ಏಕಪಕ್ಷೀಯರಾಗಿರುತ್ತಾರೆ.

5. ವಾದಿಯು ಸಲ್ಲಿಸಿರುವ ವಾದಪತ್ರವನ್ನು ಮತ್ತು ನ್ಯಾಯಾಲಯದ ಸಮಕ್ಷಮದಲ್ಲಿರುವ ಈ ದಾವೆಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ ನಂತರ, ದಾವೆಯ ನಿರ್ಣಯಕ್ಕೆ ಈ ಕೆಳಗಿನ ಅಂಶಗಳು ಉದ್ಭವಿಸಿರುತ್ತವೆ.

## ಅಂಶಗಳು

1. ವಾದಿಯು ಸದರಿ ದಾವೆಯಲ್ಲಿ ಕೇಳಿದ ಪರಿಹಾರವನ್ನು ಪಡೆಯಲು ಅರ್ಹಳೇ?
2. ಯಾವ ಆದೇಶ?

6. ವಾದಿಯು ಮೇಲಿನ ವಿವಾದಾಂಶವನ್ನು ಸಾಬೀತು ಪಡಿಸುವ ಸಲುವಾಗಿ, ತನ್ನನ್ನು ತಾನು ಪಿಡಬ್ಲೂ-1 ಎಂದು ವಿಚಾರಣೆಗೆ ಒಳಪಡಿಸಿಕೊಂಡು, ಸದರಿ ಪ್ರಮಾಣ ಪತ್ರದಲ್ಲಿ ತನ್ನ ವಾದ ಪತ್ರದ ಅಂಶಗಳನ್ನು ಪುನರುಚ್ಚರಿಸುತ್ತಾರೆ. ತನ್ನ ಪ್ರಮಾಣ

ಪತ್ರದ ಸಾಕ್ಷ್ಯಕ್ಕೆ ಪೂರಕವಾಗಿ, ವಾದಿಯು ನಿಪಿ–1 ಮತ್ತು 2 ರ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ಪ್ರತಿವಾದಿಯು ನ್ಯಾಯಾಲಯಕ್ಕೆ ಹಾಜರಾಗದೇ ಏಕಪಕ್ಷೀಯರಾಗಿರುತ್ತಾರೆ.

7. ವಾದಿಯು ಸಲ್ಲಿಸಿರುವ ವಾದಪತ್ರವನ್ನು ಮತ್ತು ನ್ಯಾಯಾಲಯದ ಸಮಕ್ಷಮದಲ್ಲಿರುವ ಈ ದಾವೆಗೆ ಸಂಬಂಧಿಸಿದಂತೆ ಲಭ್ಯವಿದ್ದ ಎಲ್ಲಾ ಸಾಕ್ಷಾಧಾರಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, ವಾದ ವಿವಾದಗಳನ್ನು ಆಲಿಸಿದ ನಂತರ, ಮೇಲಿನ ಅಂಶಗಳಿಗೆ ನ್ಯಾಯಾಲಯದ ಉತ್ತರವು ಈ ಕೆಳಕಂಡಂತೆ ಇರುತ್ತದೆ.

ಅಂಶ 1 : ***ನಕಾರಾತ್ಮಕವಾಗಿ.***

ಅಂಶ 2 : ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ,

## ಕಾ ರ ಣ ಗ ಳು

8. **ಅಂಶ 1.** ವಾದಿಯು ತನ್ನ ವಾದ ಪತ್ರದ ಸಂಗತಿಗಳನ್ನು ರುಜುವಾತುಪಡಿಸಲು ತನ್ನನ್ನು ತಾನು ಪಿಡಬ್ಲೂ1 ಎಂದು ವಿಚಾರಣೆಗೊಂಡು ತಮ್ಮ ಮುಖ್ಯ ವಿಚಾರಣೆಯಲ್ಲಿ ವಾದ ಪತ್ರದಲ್ಲಿನ ಸಂಗತಿಗಳನ್ನೇ ಪುನರುಚ್ಚರಿಸಿರುತ್ತಾರೆ.

9. ವಾದಿ ಮತ್ತು ಪ್ರತಿವಾದಿಯ ವಿವಾಹವು ಗುರುಹಿರಿಯರ ಸಮಕ್ಷಮದಲ್ಲಿ ದಿನಾಂಕ 01-07-2018 ರಂದು ಮುಸ್ಲಿಂ ಧಾರ್ಮಿಕ ಮತಪದ್ಧತಿಯಂತೆ, ಹೊಸನಗರ ತಾಲ್ಲೂಕು, ರಿಪ್ಪನಪೇಟೆಯ ವಿಶ್ವಮಾನವ ಸಭಾಭವನದಲ್ಲಿ ನಡೆದಿದ್ದು, ಈ ಬಗ್ಗೆ ನಿ.ಪಿ.1 ರಂತೆ ವಿವಾಹದ ಆಮಂತ್ರಣ ಪತ್ರಿಕೆಯನ್ನು ಹಾಜರುಪಡಿಸಿರುತ್ತಾರೆ. ಸದರಿ ನಿ.ಪಿ.1 ರ ದಾಖಲೆಗೆ ಪೂರಕವಾಗಿ ನಿ.ಪಿ.2 ರಂತೆ ವಿವಾಹದ ಕಾಲಕ್ಕೆ ತೆಗೆದ ವಾದಿ ಮತ್ತು ಪ್ರತಿವಾದಿಯ ಫೋಟೋವನ್ನು ವಾದಿಯು ಹಾಜರುಪಡಿಸಿರುತ್ತಾರೆ. ವಾದಿ ಮತ್ತು ಪ್ರತಿವಾದಿಯ ವಿವಾಹದ ನೋಂದಣಿ ಪ್ರಮಾಣ ಪತ್ರವನ್ನು ವಾದಿಯು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ. ಅದೇರೀತಿಯಾಗಿ, ವಾದಿ ಮತ್ತು ಪ್ರತಿವಾದಿಯ ದಾಂಪತ್ಯ ಜೀವನದಿಂದ ಒಂದು ಮಗು ಜನಿಸಿರುವುದಾಗಿ ತಮ್ಮ ವಾದ ಪತ್ರದಲ್ಲಿ ವಾದಿಯು ಹೇಳಿದ್ದರು ಸಹ ಸದರಿ ಮಗುವಿನ ಜನನ ಪ್ರಮಾಣ ಪತ್ರವನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ. ಸದರಿ ವಾದಿಯು ತಮ್ಮ ಮಗುವಿನ ಜನನ ದಿನಾಂಕವನ್ನು ಸಹ ವಾದ ಪತ್ರದಲ್ಲಿ ಬಹಿರಂಗಪಡಿಸಿರುವುದಿಲ್ಲ. ಪ್ರಸ್ತುತ ದಾವೆಯು ವಾದಿ ಮತ್ತು ಪ್ರತಿವಾದಿಯ ನಡುವಿನ ವಿವಾಹದ ವಿಘಟನೆಗಾಗಿ ದಾಖಲು ಮಾಡಿರುವ ಕಾರಣ ತಮ್ಮ ಮಗುವಿನ ಜನನ ದಾಖಲೆಗಳು ಹಾಗೂ ವಿವರಗಳು ಅಗತ್ಯವಿಲ್ಲದಿದ್ದರು ಸಹ ವಾದಿ ಮತ್ತು ಪ್ರತಿವಾದಿಯ ದಾಂಪತ್ಯ ಜೀನದ ಬಗ್ಗೆ ತಿಳಿಯಲು ಆ ದಾಖಲೆಗಳ ಅವಶ್ಯಕತೆ ಇರುತ್ತದೆ.

10. ವಾದಿಯು ಹಾಜರುಪಡಿಸಿರುವ ನಿ.ಪಿ.1 ರ ಲಗ್ನಪತ್ರಿಕೆಯಲ್ಲಿ ಪ್ರತಿವಾದಿಯ ವಿಳಾಸವು ನಮೂದಗಿರುವುದಿಲ್ಲ. 2018 ನೇ ಸಾಲಿನಲ್ಲಿ ವಾದಿ ಮತ್ತು ಪ್ರತಿವಾದಿಯ ವಿವಾಹವು ನಡೆದಿದ್ದರು ಸಹ ಸದರಿರವರು ಸರ್ಕಾರಿ ದಾಖಲೆಗಳಾದ ಆಧಾರ್ ಕಾರ್ಡ್, ಚುನಾವಣಾ ಗುರುತಿನ ಚೀಟಿ, ಪಡಿತರ ಚೀಟಿ ಇತ್ಯಾದಿಗಳು ಬದಲಾವಣೆ ಮಾಡಿಕೊಂಡಿರುವ ಬಗ್ಗೆ ಸದರಿ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ. ಈ ದಾವೆಯಲ್ಲಿ ಪ್ರತಿವಾದಿಯ ಹಾಜರಾತಿಗಾಗಿ ನ್ಯಾಯಾಲಯವು ನೀಡಿದ ಸಮನ್ಸ್ ಪ್ರತಿವಾದಿವು ವಿಳಾಸವು ಸರಿಯಾಗಿ ಇಲ್ಲ ಎಂಬ ಕಾರಣಕ್ಕಾಗಿ ಜಾರಿಯಾಗದೇ ವಾಪಸ್ಸಾಗಿರುತ್ತದೆ. ತದನಂತರ, ದಿನಾಂಕಃ 24.01.2026 ರಂದು ನೋಂದಾಯಿತ ಅಂಚೆ ಮೂಲಕ ಪ್ರತಿವಾದಿಗೆ ನ್ಯಾಯಾಲಯದಿಂದ ಕಳುಹಿಸಿದ ನೋಟೀಸು **Addressee left without intimation. Hence, return to sender** ಎಂದು ವಾಪಸ್ಸಾಗಿರುತ್ತದೆ. ತದನಂತರ, ದಿನಾಂಕಃ 25.03.2026 ರಂದು ವಾದಿಯು ಮಧ್ಯಂತರ ಅರ್ಜಿ ಸಂಖ್ಯೆ 1 ನ್ನು ಸಿವಿಲ್ ಪ್ರಕ್ರಿಯಾ ಕ್ರಮಾದೇಶ 5 ನಿಯಮ 20 ರ ಅಡಿಯಲ್ಲಿ ಸಲ್ಲಿಸಿ, ನ್ಯಾಯಾಲಯದ ಆದೇಶ ಪಡೆದು ಪತ್ರಿಕಾ ಪ್ರಕಟಣೆಯ ಮೂಲಕ ಪ್ರತಿವಾದಿಯ ಹಾಜರಾತಿಗಾಗಿ ಪ್ರಕಟಣೆಯನ್ನು ಹೊರಡಿಸಿರುತ್ತಾರೆ. ಆದರೂ ಸಹ ಪ್ರತಿವಾದಿ ಹಾಜರಾಗಿಲ್ಲ ಎಂಬುದು ನಿಜ. ಆದರೆ, ಸದರಿ ಏಕ ಮಾತ್ರ ಕಾರಣದಿಂದಾಗಿ ವಾದಿಯು ತನ್ನ ವಾದ ಪತ್ರದಲ್ಲಿ ಹೇಳಿದ ಎಲ್ಲಾ ಸಂಗತಿಗಳು ನೈಜವಾದವು ಎಂದು

ಹೇಳಲು ಆಗುವುದಿಲ್ಲ. ಆದ್ದರಿಂದ, ವಾದಿಯು ಸ್ವತಂತ್ರ್ಯ ತನ್ನ ದಾವೆಯನ್ನು ಸಾಕ್ಷ್ಯಾಧಾರಗಳಿಂದ ಸಾಬೀತುಪಡಿಸಬೇಕಾಗುತ್ತದೆ.

11. ವಾದಿಯು ತನ್ನ ವಾದ ಪತ್ರದಲ್ಲಿ ದಿನಾಂಕಃ 09.04.2021 ರಂದು ಪ್ರತಿವಾದಿಯು ವಾದಿಗೆ ಒಂದು ನೋಟೀಸ್ ನ್ನು ನೀಡಿ ಸದರಿ ನೋಟೀಸಿನಲ್ಲಿ ವಾದಿಗೆ ಬೇರೆ ವ್ಯಕ್ತಿಯೊಂದಿಗೆ ಅನೈತಿಕ ಸಂಬಂಧ ಇದೆ ಎಂದು ತಿಳಿಸಿರುವುದಲ್ಲದೇ, ವಾದಿಗೆ ಅಶ್ಲೀಲಕರವಾದ ಸಂದೇಶಗಳನ್ನು ಕಳುಹಿಸಿರುವುದಾಗಿ ಹೇಳಿದ್ದಾರೆ. ಈ ಕುರಿತು ಸದರಿ ವಾದಿಯು ಪ್ರತಿವಾದಿಯ ವಿರುದ್ಧ ಆಧಾರರಹಿತ ಆರೋಪಗಳು ಮಾಡಿದ್ದರ ಸಂಬಂಧ ಕಾನೂನಿನ ಕ್ರಮಗಳನ್ನು ಕೈಗೊಂಡಿರುವುದಿಲ್ಲ. ಪ್ರತಿವಾದಿಯು ವಾದಿಗೆ ಕಿರುಕುಳ ನೀಡಿರುವುದಾಗಿ ತನ್ನ ವಾದ ಪತ್ರದಲ್ಲಿ ಹೇಳಿದ್ದು, ಸದರಿ ವಾದಿ ಮತ್ತು ಪ್ರತಿವಾದಿಯ ನಡುವೆ ಈವರೆಗೆ ಯಾವುದೇ ದೂರುಗಳು ದಾಖಲಾಗಿರುವುದಿಲ್ಲ. ವಾದಿ, ಪ್ರತಿವಾದಿಯ ವಿರುದ್ಧ ಜೀವನಾಶ ಕೋರಿ ಕ್ರಿಮಿನಲ್ ಮಿಸ್ 73/2021 ರಂತೆ ಅರ್ಜಿಯನ್ನು ಸಲ್ಲಿಸಿರುವುದಾಗಿ ತನ್ನ ವಾದ ಪತ್ರದಲ್ಲಿ ಹೇಳಿದ್ದರೂ ಸಹ ಈ ಸಂಬಂಧ ಸದರಿ ಅರ್ಜಿಯು ಈಗ ಯಾವ ಹಂತದಲ್ಲಿದೆ ಎನ್ನುವ ಸೂಕ್ತ ಮಾಹಿತಿಯನ್ನು ನೀಡಿರುವುದಿಲ್ಲ. ಅದೇರೀತಿಯಾಗಿ, ಜೀವನಾಂಶ ಅರ್ಜಿಗೆ ಸಂಬಂಧಪಟ್ಟ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ.

12. ಸದರಿ ಪ್ರಕರಣದ ವಾದಿಯು ಮುಸ್ಲಿಂ ಧರ್ಮದ ಮಹಿಳೆಯಾಗಿದ್ದು, ಮುಸ್ಲಿಂ ಮತಪದ್ಧತಿಯಂತೆ ಪ್ರತಿವಾದಿಯೊಂದಿಗೆ ವಿವಾಹವಾಗಿರುತ್ತಾಳೆ. ಪ್ರಸ್ತುತ ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ ವಾದಿಗೆ ತಮ್ಮ ಮತೀಯ ಕಾನೂನಿನಲ್ಲಿ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಖುಲಾನಾಮೆಯನ್ನು ಮಾಡಿಕೊಳ್ಳುವ ಯಾವುದೇ ಪ್ರಯತ್ನವನ್ನು ಮಾಡಿದ ಬಗ್ಗೆ ವಾದ ಪತ್ರದಲ್ಲಿ ಯಾವುದೇ ಉಲ್ಲೇಖವಿರುವುದಿಲ್ಲ. ಆದಕಾರಣ, ಈ ಸಂದರ್ಭದಲ್ಲಿ ಗೌರವಾನ್ವಿತ ಕೇರಳ ಉಚ್ಚ ನ್ಯಾಯಾಲಯದ ನಿರ್ಧರಿತ ಪ್ರಕರಣವಾದ ಮಾಟ್ರಮೋನಿಯಲ್ ಅಪೀಲ್ ನಂ.89/2020 ರ ತೀರ್ಪನ್ನು ನೋಡುವುದು ಅಗತ್ಯ. ಸದರಿ ತೀರ್ಪಿನಲ್ಲಿ ಗೌರವಾನ್ವಿತ ಕೇರಳ ಉಚ್ಚ ನ್ಯಾಯಾಲಯವು,

> ***"Khula is the form of divorce conferred upon wife- Shariyath Act recognized extra-judicial divorce in the form of Thalaq, Khula etc, it proceeds from the unilateral will of the party- The right to invoke Khula conferred upon a married Muslim women is an absolute right-The court shall record the Khula or Thalaq declare the marital status of the parties after due notice to the other party***". *ಎಂಬುದಾಗಿ ಅಭಿಪ್ರಾಯಪಟ್ಟಿರುತ್ತದೆ.*

13. ಸದರಿ ತೀರ್ಪಿನಲ್ಲಿನ ತತ್ವವನ್ನು ಪ್ರಸ್ತುತ ಪ್ರಕರಣಕ್ಕೆ ಅನ್ವಯಿಸಿದಾಗ ವಾದಿಯು ವಾದಿಯು ಮುಸ್ಲಿಂ ಮತ ಪದ್ದತಿಯಂತೆ ಸಾಕ್ಷಿದಾರರ ಸಮಕ್ಷಮ ಪ್ರತಿವಾದಿಯೊಂದಿಗಿನ ತನ್ನ ವಿವಾಹವನ್ನು ವಿಘಟಿಸಿಕೊಳ್ಳಲು ಹಕ್ಕನ್ನು ಹೊಂದಿದ್ದಾಳೆ. ಮಹಮ್ಮದಿಯ ಕಾನೂನಿನಂತೆ ಮುಸ್ಲಿಂ ಧರ್ಮದ ಇಬ್ಬರೂ ವ್ಯಕ್ತಿಗಳ ವಿವಾಹವೊಂದು ಕರಾರು ಆಗಿರುತ್ತದೆ. ಸದರಿ ವಿವಾಹವನ್ನು ವಾದಿಯು(ಮಹಿಳೆ) ತನ್ನ ನಿಹಿತ ಹಕ್ಕನ್ನು ಚಲಾಯಿಸುವ ಮೂಲಕ ವಿಘಟನೆಗೊಳಿಸಿಕೊಳ್ಳುವ ಹಕ್ಕನ್ನು ಹೊಂದಿದ್ದಾಳೆ. ಆದರೆ, ಸದರಿ ಹಕ್ಕನ್ನು ಚಲಾಯಿಸದೇ ವಾದಿಯು ಈ ದಾವೆಯನ್ನು ನ್ಯಾಯಾಲಯದ ಮುಂದೆ ತಂದಿದ್ದು ವಾದ ಪತ್ರದಲ್ಲಿ ಹೇಳಿರುವ ಸಂಗತಿಗಳು ಸದರಿ ವಾದಿ ಮತ್ತು ಪ್ರತಿವಾದಿಯ ನಡುವಿನ ವಿವಾಹವನ್ನು ವಿಘಟನೆಗೊಳಿಸಲು ಸಕಾರಣಗಳು ಆಗಿರುವುದಿಲ್ಲ. ಆದಕಾರಣ, ದಾವೆಯಲ್ಲಿ ಕೋರಿದಂತೆ ಪರಿಹಾರ ಪಡೆಯಲು ವಾದಿಯು ಅರ್ಹಳಾಗಿಲ್ಲ ಎಂಬುದಾಗಿ ಅಭಿಪ್ರಾಯಪಟ್ಟು ಮೇಲಿನ ಅಂಶ 1 ನ್ನು **ನಕಾರಾತ್ಮಕವಾಗಿ** ಉತ್ತರಿಸುತ್ತೇನೆ.

14. **ಅಂಶ-2:** ಈ ಮೇಲೆ ಚರ್ಚಿಸಿದ ಕಾರಣಗಳಿಗಾಗಿ ಈ ಕೆಳಕಂಡಂತೆಃ

## ಆದೇಶ

ವಾದಿಯ ದಾವೆಯನ್ನು ವೆಚ್ಚಗಳ ಸಹಿತ ವಜಾಗೊಳಿಸಲಾಗಿದೆ.

ತೀರ್ಪಿನಂತೆ ಡಿಕ್ರಿ ಬರೆಯಿರಿ.

*(ಶೀಘ್ರಲಿಪಿಗಾರರಿಂದ ನೇರವಾಗಿ ಕಂಪ್ಯೂಟರಿನಲ್ಲಿ ಬೆರಳಚ್ಚು ಮಾಡಿಸಿ, ನಂತರ ಅದನ್ನು ಓದಿ, ತಪ್ಪುಗಳನ್ನು ತಿದ್ದುಪಡಿ ಮಾಡಿ, ಈ ದಿನ ಅಂದರೆ, ದಿನಾಂಕಃ 03 ನೇ ಆಗಸ್ಟ್ 2026 ರಂದು ತೆರೆದ ನ್ಯಾಯಾಲಯದಲ್ಲಿ ಉದ್ಘೋಷಿಸಿದ್ದೇನೆ.)*

(**ಮಾದೇಶ ಎಂ.ವಿ.**,)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ
ದರ್ಜೆ ನ್ಯಾಯಿಕ ದಂಡಾಧಿಕಾರಿಗಳು –ಸಾಗರ.

## ಅನುಬಂಧ

**ವಾದಿಯ ಪರ ವಿಚಾರಣೆಗೊಳಪಟ್ಟ ಸಾಕ್ಷಿದಾರರ ಪಟ್ಟಿ:**

ಪಿ.ಡಬ್ಲ್ಯೂ.1 ಶ್ರೀಮತಿ ಸುಹಾನ ಬಾನು ಅಲಿಯಾಸ್ ಸಹಾನ ಹೆಚ್.

**ವಾದಿಯ ಪರ ಗುರುತಿಸಲ್ಪಟ್ಟ ದಾಖಲೆಗಳ ಪಟ್ಟಿ:**

| | |
|---|---|
| ನಿ.ಪಿ .1 | ವಿವಾಹದ ಆಹ್ವಾನ ಪತ್ರಿಕೆ. |
| ನಿ.ಪಿ .2 | ಫೋಟೋ. |

**ಪ್ರತಿವಾದಿಯ ಪರ ವಿಚಾರಣೆಗೊಳಪಟ್ಟ ಸಾಕ್ಷಿದಾರರ ಪಟ್ಟಿ:**

–ಇಲ್ಲಾ–

**ಪ್ರತಿವಾದಿಯ ಪರ ಗುರುತಿಸಲ್ಪಟ್ಟ ದಾಖಲೆಗಳ ಪಟ್ಟ**

–ಇಲ್ಲಾ–

(**ಮಾದೇಶ ಎಂ.ವಿ.**,)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ. ದ.ನ್ಯಾದಂಡಾಧಿಕಾರಿಗಳು, ಸಾಗರ.